ಸಾಕ್ಷಿಯನ್ನು ದಿಃ 18.11.2022 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು

ಮುಂದುವರಿದ ಮುಖ್ಯ ವಿಚಾರಣೆ ಃ ಸರಕಾರಿ ಅಭಿಯೋಜಕರವರಿಂದ ಃ

9. ದಿಃ 23.08.2018 ರಂದು ನಾನು ಆಳನಹಳ್ಳಿ ಪೊಲೀಸ್ ಠಾಣೆಗೆ ಪೊಲೀಸರಿಗೆ ನಮ್ಮ ಅಕ್ಕನ ಪರ್ಸಿನಲ್ಲಿ ಸಿಕ್ಕಿದ್ದ ಅವಳ ಕೈಬರಹದಲ್ಲಿ ಇದ್ದ ಎರಡು ಚೀಟಿಗಳನ್ನು ಕೊಟ್ಟಿದ್ದೆನು. ಒಂದು ಚೀಟಿಯಲ್ಲಿ ಅರಸು ಹುಡುಗಿ ಸೌಭಾಗ್ಯ ಅಂತ ಬರೆದಿತ್ತು. ಮತ್ತೊಂದು ಚೀಟಿಯಲ್ಲಿ ತೇಜಸ್ವಿನಿ ಅಂತ ಬರೆದು ಫೋನ್ ನಂಬರ್ ಬರೆಯಲಾಗಿತ್ತು. ಪೊಲೀಸರು ಇಬ್ಬರು ಸಾಕ್ಷಿದಾರರನ್ನು ಕರೆಯಿಸಿ ಅವರ ಸಮಕ್ಷಮ ಚೀಟಿಗಳನ್ನು ತೆಗೆದುಕೊಂಡು ಅವುಗಳನ್ನು ಕವರ್ ನಲ್ಲಿ ಹಾಕಿ ಕೆ ಹೆಚ್ ಪಿ ಎಸ್ ಎಂದು ಸೀಲ್ ಮಾಡಿದರು. ಅವುಗಳ ಮೇಲೆ ನನ್ನ ಹಾಗೂ ಸಾಕ್ಷಿದಾರರಾದ ಸ್ವಾಮಿ ಮತ್ತು ಪ್ರದೀಪ ರವರ ಸಹಿ ಪಡೆದುಕೊಂಡರು ಮತ್ತು ಆ ಬಗ್ಗೆ ನನ್ನ ಮರುಹೇಳಿಕೆ ಪಡೆದುಕೊಂಡಿರುತ್ತಾರೆ. ಮಧ್ಯಾಹ್ನ 4.30 ರಿಂದ 5.30 ವರೆಗೆ ಮಹಜರ್ ಮಾಡಿ ಚೀಟಿಗಳನ್ನು ವಶಕ್ಕೆ ಪಡೆದುಕೊಂಡರು. ಮಹಜರ್ ನನ್ನ ಮತ್ತು ಸಾಕ್ಷಿದಾರರ ಸಹಿಗಳನ್ನು ಪಡೆದುಕೊಂಡರು.

10. ಆ ಸಮಯದಲ್ಲಿ ಮಾಡಿದ ಮಹಜರ್ ನೋಡಿದರೆ ಗುರುತಿಸುತ್ತೇನೆ. ಈಗ ತೋರಿಸಿದ ಮಹಜರ್ ನೋಡಿದೆ. ಅದರಲ್ಲಿ ನನ್ನ ಸಹಿ ಇದೆ. ಸದರಿ ಮಹಜರ್ ನ್ನು ನಿಪಿ 6

ಎಂದು ಸಾಕ್ಷಿದಾರರ ಸಹಿಯನ್ನು ನಿಪಿ 6 ಎ ಎಂದು ಗುರುತಿಸಲಾಯಿತು. ಈಗ ತೋರಿಸಿದ ನೋಟೀಸ್ ನೋಡಿದೆ. ಅದನ್ನು ಪೊಲೀಸರು ದಿಃ 16.08.2018 ರಂದು ನನಗೆ ನೀಡಿದ ನೋಟೀಸ್ ಇರುತ್ತದೆ. ಅದನ್ನು ನಿಪಿ 7 ಎಂದು ಸಾಕ್ಷಿದಾರರ ಸಹಿಯನ್ನು ನಿಪಿ 7 ಎ ಎಂದು ಗುರುತಿಸಲಾಯಿತು.

11. ಪೊಲೀಸರು ವಶಪಡಿಸಿಕೊಂಡ ಎರಡು ಚೀಟಿಗಳನ್ನು ನೋಡಿದರೆ ಗುರುತಿಸುತ್ತೇನೆ.

12. ಈ ಹಂತದಲ್ಲಿ ಎಫ್ ಎಸ್ ಎಲ್ ನಿಂದ ಅಸಿಸ್ ಟೆಂಟ್ ಕಮಿಷನರ್ , ದೇವರಾಜ ಸಬ್ ಡಿವಿಜನ್ , ಮೈಸೂರು ಸಿಟಿ ಅವರಿಗೆ ಬಂದ ಕವರ್ ನಲ್ಲಿ ಇದ್ದ ಎರಡು ಚೀಟಿಗಳನ್ನು ಸಾಕ್ಷಿದಾರರಿಗೆ ತೋರಿಸಲಾಗಿ ಅವೇ ಚೀಟಿಗಳು ಎಂದು ಒಪ್ಪಿಕೊಂಡಿರುತ್ತಾರೆ. ಸೌಭಾಗ್ಯ ಅರಸು ಹುಡುಗಿ ಎಂದು ಬರೆದಿರುವ ಚೀಟಿಯನ್ನು ನಿಪಿ 8 ಎಂದು , ತೇಜಸ್ವಿನಿ ಮತ್ತು ಮೊಬೈಲ್ ನಂಬರ್ ಇರುವ ಚೀಟಿಯನ್ನು ನಿಪಿ 9 ಎಂದು ಗುರುತಿಸಲಾಯಿತು.

13. ಮೃತಳು ಸತ್ತಿರುವ ಕೋಣೆಯಲ್ಲಿ ಸಿಕ್ಕಿದ್ದ ಪರ್ಸನ್ನು ನಾನು ನನ್ನ ಭಾವ ಕುಮಾರ ರವರ ಮನೆಯಲ್ಲಿ ಇಟ್ಟಿದ್ದೆನು. ಪೊಲೀಸರು ಕೇಳಿದಾಗ ಅದರಲ್ಲಿ ಇದ್ದ ಚೀಟಿಗಳನ್ನು ಪೊಲೀಸರಿಗೆ ನೀಡಿದ್ದೆನು.

<u>ಪಾಟೀ ಸವಾಲು ಃ ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ ಮುಂದೂಡಲಾಯಿತು</u>

(ನನ್ನ ಉ ಮೇ ತೆ ನ್ಯಾ ಬೆ ಮಾಡಲಾಯಿತು)

ಓ ಹೇ ಕೇ ಸ ಇ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,

ಮೈಸೂರು